ಭಾವನಾ ಪ್ಯಾಂಟ್, ಷರ್ಟ್, ಸೀರೆ ವಿತರಿಸಿದ್ದಳು. ಸಹೋದ್ಯೋಗಿಗಳಿಗೆ ಕಡಿಮೆ ಪ್ರಮಾಣದ ಬೋನಸ್ ಬಂದು ತನಗೆ ಮಾತ್ರ ಇಷ್ಟು ದೊಡ್ಡ ಮೊತ್ತ ಲಭಿಸಿತೆಂಬ ಅವರ ಬೇಸರವನ್ನು ಕಳೆಯುವುದು ಭಾವನಾಳ ಉದ್ದೇಶವಾಗಿತ್ತು. ಅದನ್ನು ಜೀರ್ಣಿಸಿಕೊಳ್ಳಲಾಗದ ಹಲವರು ಇದು ತಮ್ಮನ್ನು ಮತ್ತಷ್ಟು ತಗ್ಗಿಸಿತೋರಿಸಲು ಅವಳು ನಡೆಸಿದ ಹುನ್ನಾರ ಎಂದೇ ಭಾವಿಸಿ ಬಹಿರಂಗವಾಗಿಯೇ ಅವುಗಳನ್ನು ಸೆಕ್ಯೂರಿಟಿ ಗಾರ್ಡುಗಳಿಗೆ, ಅಟೆಂಡರಿಗೆ ಕೊಟ್ಟು ಪರೋಕ್ಷ ಆಕ್ರೋಶ ತೋರಿದ್ದರು. ಭಾವನಾಳಿಗೆ ಅದು ಗೊತ್ತಾಗಿ ಅವಮಾನಿತಳಾಗಿದ್ದಳು. ಇವರೇಕೆ ಹೀಗೆ ವರ್ತಿಸುತ್ತಿದ್ದಾರೆ? ಬೋನಸ್ಸಿನ ಒಂದು ಭಾಗವನ್ನು ತನ್ನ ಸಹೋದ್ಯೋಗಿಗಳ ಜೊತೆ ಹಂಚಿಕೊಂಡದ್ದು ಅಂಥ ಅಪರಾಧವೆ? ತನ್ನ ಯಶಸ್ಸಿನಲ್ಲಿ ಅವರಿಗೂ ಪಾಲಿದೆ ಎಂಬುದು ಮನವರಿಕೆಯಾಗಿ ಮಾಡಿದ ಸ್ನೇಹದ್ಯೋತಕವಲ್ಲವೆ?

ಮನಸ್ಸಿನ ಬೇಗುದಿಯನ್ನು ತನ್ನಲ್ಲೇ ಅದುಮಿಟ್ಟು ಎಂದಿನಂತೆಯೇ ಭಾವನಾ ಕರ್ತವ್ಯ ತತ್ಪರಳಾಗಿದ್ದಳು. ಹಾಗಿದ್ದಾಗಲೇ ಆ ಪಾರ್ಸೆಲ್ ಕೈಸೇರಿದ್ದು! ಭಾವನಾ ಅದನ್ನು ಬಿಚ್ಚಿನೋಡಿದಳು. ಆಗಲೇ ನೆನಪಾದದ್ದು ಅಮ್ಮನ ಮಾತು. 'ದೋಸೆ ಕಾವಲಿ ಬಂದ ಕೂಡಲೇ ತೆಗೆದು ಕಾರಲ್ಲಿಟ್ಟುಬಿಡು. ಆಫೀಸಲ್ಲಿ ಮರೆತುಬಿಡಬೇಡ.' ಅದು ಅಮ್ಮನ ಅಡುಗೆಮನೆಯ ಸೊತ್ತು. ಬಿಚ್ಚಿದ ಪಾರ್ಸೆಲನ್ನು ಹಾಗೆಯೇ ಮುಚ್ಚಿ ಜೊತೆಗೊಯ್ದು ಅಮ್ಮನಿಗೆ ಕೊಟ್ಟು ಕೈತೊಳೆದಿದ್ದಳು. ಅಮ್ಮ ಅದನ್ನು ಬಿಚ್ಚಿ ನೋಡುತ್ತಾ ಮೆತ್ತಗೆ ಮಾತಿಗೆ ಮೊದಲಿಟ್ಟಳು: 'ರಾಜುಮಾಮಾ ಮುಂದಿನ ಭಾನುವಾರ ಬರ್ತೀನೆ ಅಂದಿದ್ದಾನೆ. ನಿನ್ಜೊತೆ ಮಾತಾಡ್ಬೇಕಂತೆ.'

'ಅದೆಷ್ಟು ಬಾರಿ ಹೇಳಿದ್ದೇನಮ್ಮಾ ನನಗೀಗ ಮದುವೆ ಬೇಡಾಂತ. ರಾಜುಮಾಮನನ್ಯಾಕೆ ಬರ್ಲಿಕ್ಕೆ ಹೇಳಿದೆ? ಇನ್ನು ಅದೊಂದು ಗೋಳು. ಅಕ್ಕ ಈ ಕಡೇಂದ ಹೋಗ್ಬೇಕಿದ್ರೆ ಮಾಮ ಆ ಕಡೇಂದ ಬರೋದು. ಯಾಕಮ್ಮಾ ನನ್ನ ಕೇಳದೆ ಹೀಗೆಲ್ಲಾ ಮಾಡ್ತೀಯಾ? ಈಗ್ಲೇ ಫೋನ್ಮಾಡಿ ಹೇಳು, ಮದುವೆ ಬಗ್ಗೆ ಮಾತ್ನಾಡೋದಕ್ಕಾದ್ರೆ ಬರೋದೇ ಬೇಡಾಂತ. ಇಗೋ ಫೋನ್ ತಗೋ. ಡಯಲ್ ಮಾಡಿದ್ದೇನೆ. ಮಾತಾಡಮ್ಮ.' ಭಾವನಾ ಫೋನ್ ಅಮ್ಮನ ಕೈಗೆ ಕೊಟ್ಟಳು.

ಅಮ್ಮ 'ಮಾವನಿಗೆ ಹೇಳಿದ್ದು ನಾನಲ್ವೇ; ನಳಿನ. ನಮಗೆ ನಿನ್ನೊತೆ ಮಾತಾಡ್ಲಿಕ್ಕಾಗ್ತದಾ? ಮದುವೆ ಅಂದ ತಕ್ಷಣ ಉರಿದು ಬೀಳ್ತೀಯಲ್ಲ. ಅದಕ್ಕೇ ಅವ್ನೇ ಮಾವನಿಗೆ ಹೇಳಿದ್ದು' ಎಂದು ಗೊಣಗುತ್ತ ಅದನ್ನು ಆಫ್ ಮಾಡಿಟ್ಟು ದೋಸೆಯ ಕಾವಲಿಯೊಂದಿಗೆ ಒಳಗೆ ಹೋದರು.

'ಇಬ್ರೂ ಸರೀ ಇದ್ದೀರಿ' ಎನ್ನುತ್ತ ಭಾವನಾ ತನ್ನ ಕೋಣೆಗೆ ಹೊರಟುಹೋದಳು.

ಇತ್ತೀಚೆಗಿನ ದಿನಗಳಲ್ಲಿ ಭಾವನಾಳ ಮನಸ್ಸಿನ ಒಳಗೊಂದು ಅವ್ಯಕ್ತ ಬೇಗುದಿ. ಕಂಪನಿಯಲ್ಲಿ ಯಾರೋ ತನ್ನ ವಿರುದ್ಧವಾಗಿ ಸಂಚುಹೂಡುತ್ತಿದ್ದಾರೆ, ತಾನು ಅತ್ತಿತ್ತ ಹೋಗುವಾಗಲೆಲ್ಲ ಮುಸಿಮುಸಿ ನಗುತ್ತಿದ್ದಾರೆ. ತನ್ನನ್ನು ತಾತ್ಸಾರ ದೃಷ್ಟಿಯಲ್ಲಿ ನೋಡುತ್ತಿದ್ದಾರೆ – ಎಂದೆಲ್ಲ. ಒಮ್ಮೆ ಗುಂಪಿನ ಹಿರಿಯ ಸಹೋದ್ಯೋಗಿಯೊಬ್ಬರು 'ಇವಳೆಷ್ಟು ಆಟ ಆಡಿಸ್ತಾಳೆ ನೋಡೋಣ, ಆಟ ಆಡಿಸೋದಕ್ಕೆ ನಮಗೂ ಬರಲ್ವಾ?' ಎಂದದ್ದು ಹೇಗೆ ಹೇಗೋ ಆಗಿ ಅವಳ ಕಿವಿಗೆ ಬಿದ್ದಿತ್ತು. ಅವಳನ್ನು ಅನುಕೂಲಿಸುವ ಕೆಲವರಾದರೂ ತಂಡದಲ್ಲಿ ಇದ್ದಿರಬೇಕಲ್ಲ! ಅವರ ಜೊತೆಗೆ ಅದರ ಅರ್ಥವನ್ನು ಮಥಿಸುವುದಕ್ಕೆ ಪ್ರಯತ್ನಪಟ್ಟಿದ್ದಳು. ವಾಸ್ತವವಾಗಿ ಅವಳಿಗದರ ಅಗತ್ಯವಿರಲಿಲ್ಲ. ಕರ್ತವ್ಯದ ಕುರಿತಾದ ತನ್ನ ಸೂಚನೆಗಳನ್ನು ಪಾಲಿಸದೆ ಅಸಡ್ಡಾಳತನ ತೋರುವವರ, ತನ್ನನ್ನು ಪರೋಕ್ಷವೇದಿಕೆಯಲ್ಲಿ ಎಳೆದಾಡುವವರ ವಿಕಟಬುದ್ಧಿಗೆ ಸೊಪ್ಪುಹಾಕುವವಳು ಅವಳಾಗಿರಲಿಲ್ಲ. ಅದನ್ನು ಕಾಲಕ್ಕೆ ಬಿಟ್ಟುಕೊಟ್ಟು ಏನೂ ಆಗದವಳಂತೆ ತಾನಾಯಿತು ತನ್ನ ಕೆಲಸವಾಯಿತು ಎಂದುಕೊಂಡಿದ್ದರೂ ಅವಳ ನೆಮ್ಮದಿಯ ಕೊಳಕ್ಕೆ ಯಾರೋ ಕಲ್ಲು ಎಸೆದಿದ್ದಾರೆಂಬುದು ಕೆಲವೊಮ್ಮೆ ಮುಖದಲ್ಲಿ ವ್ಯಕ್ತವಾಗುತ್ತಿತ್ತು.

ಹಾಗಿದ್ದಾಗಲೇ ಭಾವನಾಳಿಗೆ ಇನ್ನೊಂದು ಆನ್‌ಲೈನ್ ಪಾರ್ಸೆಲ್ ಬಂತು. ಅರೆ! ತಾನು ಯಾವ ಪಾರ್ಸೆಲ್ಲಿಗೂ ಆರ್ಡರ್ ಕೊಟ್ಟಿರಲಿಲ್ಲವಲ್ಲ! ಒಂದು ವೇಳೆ ಅಮ್ಮನೇನಾದರೂ? ಈ ಅಮ್ಮನಿಗೆ ಎಷ್ಟು ಹೇಳಿದರೂ ಅಷ್ಟೆ. ಎಲ್ಲ ಕೊರಿಯರ್‌ಗಳೂ ತನಗೆ ಬಂದರೇನೇ ಸೇಫ್ ಎನ್ನುವುದು ಆಕೆಯ ಹುಚ್ಚು ನಂಬಿಕೆ. ಇರಲಿ. ಅಮ್ಮನಿಗೆ ವಯಸ್ಸಾಗಿದೆ. ಹೆಚ್ಚು ಸತಾಯಿಸಬಾರದು ಎಂದುಕೊಳ್ಳುತ್ತಾ ಪಾರ್ಸೆಲನ್ನು ತಿರುಗಾ ಮುರುಗಾ ನೋಡಿದಳು.

ಈಗಿನ ಪಾರ್ಸೆಲ್ಲುಗಳಲ್ಲಿ ಕಳುಹಿಸಿದವರ ವಿಳಾಸವೇ ಇರೋದಿಲ್ಲ. ತನಗಾಗಿ ತರಿಸಿದ್ದಾದರೆ ತನ್ನ ವಿಳಾಸವಷ್ಟೆ ಇರುತ್ತದೆ. ಪಕ್ಕದಲ್ಲಿ ಸಹೋದ್ಯೋಗಿಜ್ಯೂಲಾಯಾವುದೋಕಾರಣಕ್ಕಾಗಿ ಒಳಗೆ ಬಂದಿದ್ದವಳು, 'ಏನು ಭಾವನಾ, ವಿಶೇಷ ಪಾರ್ಸೆಲ್ ಬಂದ ಹಾಗಿದೆಯಲ್ಲ' ಎಂದಳು. ಅದನ್ನು ಗಮನಿಸಿದರೂ ಗಮನಿಸದವಳಂತೆ, 'ಆಯ್ತಲ್ಲ ನಿಮ್ಮ ಕೆಲಸ ಜ್ಯೂಲಾ' ಎಂದಳು. ಆಕೆ ಸುರುಸುರನೆ ಹೊರಟುಹೋದಳು. ಪಕ್ಕದಲ್ಲಿ ಯಾರೂ ಇಲ್ಲವೆಂಬುದನ್ನು ಖಾತರಿಪಡಿಸಿ ತನ್ನ ಕ್ಯಾಬಿನ್ನಿನ ಬಾಗಿಲು ಹಾಕಿಕೊಂಡು ಅಮ್ಮನಿಗೆ ಕರೆ ಮಾಡಿದಳು: 'ಅದ್ಯಾಕಮ್ಮ ನನ್ನೊಂದು ಮಾತೂ ಹೇಳದೆ ನೇರವಾಗಿ ನನ್ನ ಹೆಸರಿಗೆ ಪಾರ್ಸೆಲ್ ತರಿಸಿಬಿಡ್ತೀಯಾ?' ಭಾವನಾಳ ಮಾತು ಹಾಗೇನೆ. ಮೊದಲೇ ಉತ್ತರವನ್ನು ಅರಿತವಳಂತೆ ಪ್ರಶ್ನೆಯನ್ನು ಎಸೆದುಬಿಡುತ್ತಾಳೆ. ಮಗಳ ಆಕ್ಷೇಪದ ಪ್ರಶ್ನೆ ಕೇಳಿಕೇಳಿ ರೂಢಿಯಿರುವ ಕುಮುದಮ್ಮ, 'ಇಲ್ಲ ಮಗಳೇ, ನಿನಗೆ ಹೇಳದೆ ನಾನ್ಯಾಕೆ ಬುಕ್ ಮಾಡ್ತೇನೆ? ದೋಸೆ ಕಾವಲೀದ್ದೂ ನಿನಗೆ ಹೇಳಿದ್ದೆ. ನಳಿನಾಗೂ ನಾನೇನು ಬುಕ್ ಮಾಡ್ಲಿಕ್ಕೆ ಹೇಳ್ಳಿಲ್ಲ. ಯಾಕೆ? ಏನಾಯ್ತು?' ಎಂದು ಕೇಳುತ್ತಲೇ ಇರಬೇಕಿದ್ದರೆ ಭಾವನಾ ಫೋನಿಟ್ಟಳು. ಮೆಲ್ಲನೆ ಕತ್ತರಿ ತೆಗೆದು ಅದರ ರೆಕ್ಕೆ ಪುಕ್ಕಗಳನ್ನು ಕತ್ತರಿಸಿ, ಪಾರ್ಸೆಲ್ಲಿನ ಒಳಪ್ರವೇಶಿಸಿದಳು

ಅದನ್ನು ನೋಡುತ್ತಲೇ ಕಣ್ಣು ಕತ್ತಲೆ ಬಂದಂತೆನಿಸಿ ಭಾವನಾ ಅಲ್ಲೇ ಕುಸಿದು ಕುಳಿತಳು. ಇದ್ಯಾರೋ ಬೇಕೆಂದೇ ತನ್ನನ್ನು ಅವಮಾನಿಸಲು ಮಾಡಿದ ಕೆಲಸ. ತಡಕಾಡಿ ಪಕ್ಕದಲ್ಲಿದ್ದ ನೀರಿನ ಬಾಟಲಿಯೆತ್ತಿ ಗಟಗಟನೆ ಕುಡಿದಳು. ಹೀಗೂ ಅವಮಾನಿಸಲು ಅವರಿಗೆ ತಾನು ಮಾಡಿದ ದ್ರೋಹವಾದರೂ ಏನು? ಕನಿಷ್ಠಪಕ್ಷ ತಾನೊಬ್ಬ



ಹೆಣ್ಣು ಎಂಬ ಸೌಜನ್ಯ ಕೂಡ ಇಲ್ಲವಾಯಿತೆ? ಗರಬಡಿದವಳಂತೆ ತುಸು ಹೊತ್ತು ಕುಳಿತು, ಎಲ್ಲವನ್ನೂ ಅನಾಮತ್ತಾಗಿ ಎತ್ತಿ ಮತ್ತದೇ ಲಕೋಟೆಯೊಳಕ್ಕೆ ತಳ್ಳಿದಳು.

ಒಮ್ಮೆಲೆ ಭಾವನಾಳ ತಲೆಗೆ ಅನೇಕ ವಿಚಾರಗಳು ದಾಳಿಯಿಟ್ಟವು. ರಾಜುಮಾಮಾ ಮುಂದಿನ ವಾರ ಬರೋದು ಬೇಡ. ನಾಳೇನೇ ಬರಬೇಕು. ನನಗವರ ಪೊಲೀಸ್ ಇಲಾಖೆಯ ಸಹಾಯ ಬೇಕು. ನಾನಿದನ್ನು ಸುಮ್ಮನೆ ಬಿಡಲಾರೆ. ತಂಡದ ನಾಯಕಿಯಾಗಿ ಮೇಲಿನವರ ಆಣತಿಗಳನ್ನು ಜಾರಿಮಾಡುವುದು ನನ್ನ ಕರ್ತವ್ಯ. ಆ ಕರ್ತವ್ಯ ನಿಭಾಯಿಸಲೂ ದೊಣೆನಾಯಕರ ಅಪ್ಪಣೆ ಬೇಕೆ? ಭಾವನಾ ಫೋನೆತ್ತಿಕೊಂಡಳು, ಕೈ ಕಂಪಿಸುತ್ತಿತ್ತು.

